ದಿನಾಂಕ 12.06.2019 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀಸವಾಲು : ವಾದಿಗಳ ಪರ ಶ್ರೀ ಬಿ.ಜೆ.ಆರ್. ವಕೀಲರಿಂದ:**

೧. ನನ್ನ ಹೆಂಡತಿ ಸಣ್ಣಚಿತ್ತಮ್ಮ(೫ನೇ ಪ್ರತಿವಾದಿ) ಆರೋಗ್ಯದಿಂದ ಇದ್ದಾರೆ ಎಂದರೆ ಸರಿಯಲ್ಲ. ನಾನು ಅನಾರೋಗ್ಯದ ಕಾರಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದೇನೆ ಎಂದರೆ ನಾನು ಮತ್ತು ನನ್ನ ಹೆಂಡತಿ ಸಹ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದೇವೆ ಎನ್ನುತ್ತಾರೆ. ಕ್ರಯ ಪತ್ರ ದಿನಾಂಕ:೧೩.೦೪.೧೯೯೩ ರಲ್ಲಿನ ಸರ್ವೆ ನಂ ೬೬ ಎಂದರೆ ಸರಿ. ಸದರಿ ಸ್ವತ್ತು ಚಿಕ್ಕದಾಸಪ್ಪನವರ ಹಿರಿಯ ಮಗ ಈರಮರಿಯಪ್ಪನಿಗೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಸರಿ. ಕ್ರಯ ಪತ್ರ ದಿನಾಂಕ:೧೩.೦೪.೧೯೯೩ ಪೂರ್ವದಲ್ಲಿ ಸ್ವತ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿದ್ದೇನೆ ಎಂದರೆ ಸರಿ. ಈ ರೀತಿ ಯಾವ ಯಾವ ದಾಖಲೆಗಳನ್ನು ಈರಮರಿಯಪ್ಪನವರ ಕಡೆಯಿಂದ ನೀವು ಪಡೆದುಕೊಂಡಿದ್ದೀರಿ ಎಂದರೆ ಸಾಗುವಳಿ ಚೀಟಿ, ಪಹಣಿ ಪತ್ರಿಕೆಗಳು, ರುಣಭಾರ ರಾಹಿತ್ಯ ಪ್ರಮಾಣ ಪತ್ರ ಇವುಗಳನ್ನು ಪಡೆದು ಪರಿಶೀಲಿಸಿದ್ದೇ. ಸಾಗುವಳಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸ್ವತ್ತನ್ನು ಖರೀದಿಸುವ ಕಾಲಕ್ಕೆ ಈರಮರಿಯಪ್ಪನಿಗೆ ಎಷ್ಟು ಜನ ಸಹೋದರರು ಇದ್ದರು ಎಂದು ತಿಳಿದುಕೊಂಡಿದ್ದೇನೆ. ಅವರುಗಳೆಂದರೆ ಕದುರಣ್ಣ, ದ್ಯಾವಪ್ಪ, ದ್ಯಾವರಪ್ಪ, ಈರಣ್ಣ ಮತ್ತು ದಾಸಣ್ಣ ಎಂದರೆ ಸರಿ. ಈರಮರಿಯಪ್ಪ ಹಾಗೂ ಆತನ ಸಹೋದರರು ಭಾಗ ಮಾಡಿಕೊಂಡಿದ್ದಾರೋ ಇಲ್ಲವೋ ಎಂದರೆ ಭಾಗ ಮಾಡಿಕೊಂಡಿಲ್ಲ, ೧೯೯೪ ನೇ ಸಾಲಿನಲ್ಲಿ ನ್ಯಾಯಾಲಯದ ಮೂಲಕ ವಿಭಾಗ ಮಾಡಿಕೊಂಡಿದ್ದಾರೆ. ಕ್ರಯ ಪತ್ರದ ಕಾಲಕ್ಕೆ ಕುಟುಂಬದ ವಂಶವೃಕ್ಷವನ್ನು ಪಡೆದುಕೊಂಡಿದ್ದೀರಾ ಎಂದರೆ ಸ್ವತ್ತು ಸ್ವಯಾರ್ಜಿತ ಆದ ಕಾರಣ ಪಡೆದುಕೊಂಡಿಲ್ಲ, ನ್ಯಾಯಾಲಯದ ವಿಭಾಗದ ಪ್ರಕ್ರಿಯೆಗೆ ನಾನು ಪಕ್ಷಗಾರನಲ್ಲ. ದಾವೆಯ ರಾಜಿ ಸಂಧಾನದಲ್ಲಿ ನಾನು ಭಾಗವಹಿಸಿಲ್ಲ. ರಾಜಿ ಪತ್ರದಲ್ಲಿ ನನಗೆ ಸ್ವತ್ತನ್ನು ಮಾರಾಟ ಮಾಡಿರುವ ವಿಷಯ ಬರೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ರಾಜೀ ಪತ್ರದ ವಿಷಯ ಅದೇ ದಿನ ನಾನು ನ್ಯಾಯಾಲಯದ ಬಳಿ ಬೇರೆ ಯಾವುದೋ ಕೆಲಸಕ್ಕೆ ಬಂದಿದ್ದಾಗ ತಿಳಿಯಿತು. ರಾಜೀ ಪತ್ರವನ್ನು ನಾನು ಓದಿ ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ರಾಜೀ ಪತ್ರಕ್ಕೂ ಮೊದಲು ನಮ್ಮ ಕ್ರಯಪತ್ರ ಆಗಿದೆ

ಎಂದರೆ ಸರಿ. ಕ್ರಯದ ಸ್ವತ್ತು ಈರಮರಿಯಪ್ಪನ ಸ್ವಯಾರ್ಜಿತ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಗ್ರಾಮದಲ್ಲಿ ಒಬ್ಬ ಮುಖ್ಯಸ್ಥ ಎಂದರೆ ಸರಿ.

೨. ೧೯೭೫ ಮತ್ತು ೧೯೮೨ ರಲ್ಲಿ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಚಿಕ್ಕದಾಸಪ್ಪನವರ ಮಕ್ಕಳು ಪಾಲು ವಿಭಾಗ ಪತ್ರ ಮಾಡಿಕೊಂಡಿರುವ ವಿಚಾರ ನಿಮಗೆ ತಿಳಿದಿದೆಯೇ ಎಂದರೆ ಅದೆಲ್ಲ ಸುಳ್ಳು ಎನ್ನುತ್ತಾರೆ. ಪಂಚಾಯಿತಿ ವಿಭಾಗದ ಮಾಹಿತಿ ನನಗೆ ಗೊತ್ತಿದೆ ಎಂದರೆ ಇಲ್ಲ ಎನ್ನುತ್ತಾರೆ. ಮೇಲೆ ಹೇಳಿದ ಪಂಚಾಯಿತಿ ವಿಭಾಗದಲ್ಲಿ ದಾವಾ ಐಟಂ ನಂ ೧ ಮತ್ತು ೨ ನ್ನು ಈರ ಮರಿಯಪ್ಪ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸುಳ್ಳು ಎನ್ನುತ್ತಾರೆ. ದಾವಾ ಐಟಂ ನಂ ೨ ನ್ನು ಈರಮರಿಯಪ್ಪ ಹಾಗೂ ಆತನ ಸಹೋದರರು ಜಂಟಿ ಮಾಲೀಕರಂತೆ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ೧೯೯೪ ರ ಪೂರ್ವದಲ್ಲಿ ಈರಮರಿಯಪ್ಪ ಹಾಗೂ ಆತನ ಸಹೋದರರು ಒಟ್ಟು ಕುಟುಂಬದಲ್ಲಿ ವಾಸವಿದ್ದರು ಎಂದರೆ ೧೯೩೫ ರಿಂದಲೇ ಬೇರೆ ಬೇರೆ ಮನೆ ಕಟ್ಟಿಕೊಂಡು ಬಾಯಿ ಮಾತಿನ ಭಾಗ ಮಾಡಿಕೊಂಡು ವಾಸ ಮಾಡುತ್ತಿದ್ದರು. ಈರಮರಿಯಪ್ಪ ೨೦೦೩ ನೇ ಸಾಲಿನಲ್ಲಿ ತೀರಿಕೊಂಡಿದ್ದು, ಆಗ ಅವರಿಗೆ ಸುಮಾರು ೯೫ ವರ್ಷ ವಯಸ್ಸಾಗಿರಬಹುದು.

೩. ಕ್ರಯಪತ್ರದಲ್ಲಿ ಈರಮರಿಯಪ್ಪನವರ ವಯಸ್ಸು ೭೫ ವರ್ಷ ಎಂದು ಬರೆಸಲಾಗಿದೆ ಎಂದರೆ ಈ ಮಾಹಿತಿಯನ್ನು ಅವರೇ ನೀಡಿದ್ದರು. ಈರಮರಿಯಣ್ಣನನ್ನು ಮೋಸದಿಂದ ನಂಬಿಸಿ ಆತನ ಸಹೋದರರಿಗೆ ಸ್ವತ್ತಿನಲ್ಲಿ ಭಾಗ ಸಿಗದಂತೆ ಮಾಡಲು ಕ್ರಯಪತ್ರ ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಐಟಂ ನಂ ೨ ನ್ನು ಮಾರಾಟ ಮಾಡಲು ಈರಮರಿಯಣ್ಣನಿಗೆ ಸಂಪೂರ್ಣವಾದ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸಾಗುವಳಿ ಪತ್ರವನ್ನು ಚಿಕ್ಕದಾಸಪ್ಪನ ಎಲ್ಲಾ ಮಕ್ಕಳ ಕುಟುಂಬದ ಪರವಾಗಿ ಹಿರಿಯ ಮಗನಾದ ಈರಮರಿಯಪ್ಪನ ಹೆಸರಿಗೆ ನೀಡಲಾಗಿದೆ ಎಂದರೆ ಸರಿಯಲ್ಲ. ಈರಮರಿಯಪ್ಪ ಜಮೀನು ಮಂಜೂರಾತಿ ಕೋರಿ ಅರ್ಜಿಯೊಂದಿಗೆ ಸಲ್ಲಿಸಿದ ದಾಖಲೆಗಳ ಪ್ರತಿಯನ್ನು ಪಡೆದುಕೊಂಡಿದ್ದೀರಾ ಎಂದು ಸಾಗುವಳಿ ಪತ್ರ ಹೊರೆತು ಯಾವುದೇ ಪತ್ರ ಪಡೆದಿಲ್ಲ. ಈರಮರಿಯಪ್ಪ ತನ್ನ ಎಲ್ಲಾ ಸಹೋದರರು ಒಳಗೊಂಡ ಒಟ್ಟು ಕುಟುಂಬದ ಪರವಾಗಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ.

೪. ಈರಮರಿಯಣ್ಣ ಮತ್ತು ಆತನ ಸಹೋದರರ ಪೈಕಿ ದ್ಯಾವರಪ್ಪ ಹೊರತು ಉಳಿದವರು ಅನಕ್ಷರಸ್ಥರು ಎಂದರೆ ಸರಿ. ಕ್ರಯಪತ್ರದ ಕಾಲಕ್ಕೆ ಈರಮರಿಯಣ್ಣನ ಸಹೋದರರನ್ನು ವಿಚಾರಿಸಿಲ್ಲ. ನಮ್ಮ ಖರೀದಿ ಹಾಗೂ ಖಾತೆ ವರ್ಗಾವಣೆ ಕಾನೂನು ಬಾಹಿರ ಎಂದರೆ ಸರಿಯಲ್ಲ. ಈರಮರಿಯಪ್ಪನ ಸಹೋದರರಿಗೆ ಕ್ರಯದ ವಿಚಾರ ತಿಳಿಯುತ್ತದೆ ಎಂಬ ಕಾರಣದಿಂದ ನಾನು ಸ್ವತ್ತನ್ನು ಇಲ್ಲಿಯವರೆಗೂ ಅಳತೆ, ವಗೈರು ಮಾಡಿಸಿಲ್ಲ ಎಂದರೆ ಅದೆಲ್ಲ ಸುಳ್ಳು ಎನ್ನುತ್ತಾರೆ. ಈರಮರಿಯಪ್ಪನ ಸಹೋದರರು ಮತ್ತು ಅವರ ವಾರಸುದಾರರು ಈಗಲೂ ದಾವಾ ಐಟಂ ೨ ರಲ್ಲಿ ಜಂಟಿ ಸ್ವಾಧೀನ ಅನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ.೪೮ ರಿಂದ ೬೨ ನ್ನು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಕ್ರಯಪತ್ರದಲ್ಲಿ ನಿಂಗಣ್ಣನ ಹೆಣ್ಣು ಮಕ್ಕಳನ್ನು ಸೇರಿಸಿಲ್ಲ ಎಂದರೆ ಎಲ್ಲಾ ಮೈನರ್ ಮಕ್ಕಳ ಪರವಾಗಿ ಎಂದು ಬರೆದುಕೊಟ್ಟಿದ್ದಾರೆ. ಕ್ರಯ ಪತ್ರದಲ್ಲಿ ಅಪ್ರಾಪ್ತ ಗಂಡು ಮಕ್ಕಳ ಹೆಸರನ್ನು ತಿಳಿಸಲಾಗಿದೆ ಎಂದರೆ ಇರಬಹುದು ನಿಖರವಾಗಿ ನೆನಪಿಲ್ಲ. ಕ್ರಯಪತ್ರದ ಕಾಲಕ್ಕೆ ಈರಮರಿಯಣ್ಣನ ಕುಟುಂಬದ ವಂಶವೃಕ್ಷ ಪಡೆದಿಲ್ಲ. ನಿಂಗಣ್ಣನಿಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ದಾವಾ ಐಟಂ ನಂ ೨ ರಲ್ಲಿ ವಾದಿಗಳ ಹಿಸ್ಸೆಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿನ ಸಂಗತಿಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.